ಗುರುವಾರ, ಜೂನ್ 8, 2017 | ಮಂಗಳೂರು | ₹ 5.00 | ಪುಟ 24 | ಸಂಪುಟ 20 | ಸಂಚಿಕೆ 158 • www.prajavani.net
f /prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾಮನಬಿಲ್ಲು
ಹಸಿರ ಹಾದಿಯಲ್ಲಿ ನಡೆದ ಸೈಕಲ್ ಯಾತ್ರೆ...

ಮ್ಯಾನ್ಮಾರ್: 116 ಮಂದಿ ಇದ್ದ ಸೇನಾ ವಿಮಾನದ ಅವಶೇಷ ಸಮುದ್ರದಲ್ಲಿ ಪತ್ತೆ 10

ಸಂತ್ರಸ್ತರಿಗೆ ಏಕರೂಪ ಪರಿಹಾರಕ್ಕೆ ಒತ್ತಾಯ 4

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 31,271 | 9,663 | ₹29,732 (ಬೆಂಗಳೂರು) | ₹40,800 (ಬೆಂಗಳೂರು) | 64.33 |


## ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್

(ಭಾರತ ಸರ್ಕಾರದ ಒಂದು ಶಾಸನಬದ್ಧ ಅಂಗ)
ನೆಲ್ಸನ್ ಮಂಡೇಲಾ ಮಾರ್ಗ, ವಸಂತ ಕುಂಜ, ನವದೆಹಲಿ–110070
ಫೋನ್: 011–26131576–77–78, 80 ವೆಬ್‌ಸೈಟ್: www.aicte-india.org

### ತಾಂತ್ರಿಕ ಸಂಸ್ಥೆಗಳಲ್ಲಿ ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ: 2017-18

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಇವರು ಯುವಜನತೆಗೆ ವಿವಿಧ ಕೌಶಲ್ಯಗಳ ತರಬೇತಿ ನೀಡಲೆಂದು, ಎಐಸಿಟಿಇ ಅನುಮೋದಿತ ತಾಂತ್ರಿಕ ಸಂಸ್ಥೆಗಳು ಮತ್ತು ಪಾಲಿಟೆಕ್ನಿಕ್‌ಗಳ ಮೂಲಕ ಪಿಎಂಕೆವಿವೈ–ಟಿಐ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

### ನೊಂದಣಿ ಮಾಡಿಕೊಳ್ಳಿ

ತಮ್ಮ ಮೂಲಸೌಕರ್ಯಗಳನ್ನು ಬಳಸಿಕೊಂಡು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ ನಡೆಸಲು ಆಸಕ್ತಿಯುಳ್ಳ, ಎಐಸಿಟಿಇ ಮಾನ್ಯತೆ ಪಡೆದ ಸಂಸ್ಥೆಗಳು ಎಐಸಿಟಿಇ ಇವರ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಎಐಸಿಟಿಇ ಮಾನ್ಯತೆ ಪಡೆದ ಸಂಸ್ಥೆಗಳ/ ಪಾಲಿಟೆಕ್ನಿಕ್‌ಗಳ ನೊಂದಣಿ ಪ್ರಕ್ರಿಯೆಯು 07/06/2017 ರಿಂದ ಆರಂಭಗೊಳ್ಳುತ್ತದೆ. ತರಬೇತಿ ನಂತರ ಪಡೆಯಬಹುದಾದ ಉದ್ಯೋಗ ಪಾತ್ರಗಳು ಹಾಗೂ ಅರ್ಹತಾ ವಿದ್ಯಾರ್ಹತೆ ಕುರಿತಾದ ವಿವರಗಳನ್ನು http://www.aicte-india.org/pmkvy.php ವೆಬ್‌ಸೈಟ್‌ನಲ್ಲಿ ಕಾಣಬಹುದು.

http://www.aicte-india.org/pmkvy.php ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಯೋಜನಾ ಮಾರ್ಗದರ್ಶನಗಳ ಮೇರೆಗೆ ಈ ಯೋಜನೆ ಅಡಿಯಲ್ಲಿನ ಟ್ರೇನಿಗಳ ಅಂತಿಮ ಪಟ್ಟಿಯನ್ನು ಆಯ್ಕೆ ಮಾಡಲಾಗುತ್ತದೆ.

### ವಿದ್ಯಾರ್ಥಿಗಳಿಗೆ ಕೌಶಲ್ಯ ಅವಕಾಶಗಳು

ನ್ಯಾಷನಲ್ ಸ್ಕಿಲ್ ಕ್ವಾಲಿಫಿಕೇಶನ್ ಫ್ರೇಮ್‌ವರ್ಕ್ (ಎನ್‌ಎಸ್‌ಕ್ಯೂಎಫ್) ಅಡಿಯಲ್ಲಿ ಸಮರ್ಪಕ ಕೌಶಲ್ಯ ಪ್ರಮಾಣಪತ್ರ ಪಡೆಯಲು ಆಸಕ್ತಿಯುಳ್ಳ ಅರ್ಹ ಎಲ್ಲಾ ಅಭ್ಯರ್ಥಿಗಳು ತಮ್ಮ ಸಮೀಪದಲ್ಲಿ ಈ ಯೋಜನೆಯನ್ನು ನಡೆಸುತ್ತಿರುವ ಎಐಸಿಟಿಇ ಮಾನ್ಯತೆ ಪಡೆದ ಕಾಲೇಜ್‌ಗಳನ್ನು ಸಂಪರ್ಕಿಸಬಹುದು. http://www.aicte-india.org/pmkvy.php ವೆಬ್‌ಸೈಟ್‌ನಲ್ಲಿ ಈ ಯೋಜನೆಯನ್ನು ನಡೆಸಲು ಆಯ್ಕೆಗೊಂಡ ಸಂಸ್ಥೆಗಳ ಪಟ್ಟಿಯನ್ನು ಕಾಣಬಹುದು.

ಜಾಹೀರಾತು ಸಂಖ್ಯೆ : ಎನ್‌ಎಸ್‌ಕ್ಯೂಎಫ್/06(05)/2017 ಸದಸ್ಯ ಕಾರ್ಯದರ್ಶಿ, ಎಐಸಿಟಿಇ


ಗುರುವಾರ, ಜೂನ್ 8, 2017 | ಮಂಗಳೂರು | ₹ 5.00 | ಪುಟ 24 | ಸಂಪುಟ 20 | ಸಂಚಿಕೆ 158 • www.prajavani.net
f /prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಕಾಮನಬಿಲ್ಲು
ಹಸಿರ ಹಾದಿಯಲ್ಲಿ ನಡೆದ ಸೈಕಲ್ ಯಾತ್ರೆ...
ಮ್ಯಾನ್ಮಾರ್: 116 ಮಂದಿ ಇದ್ದ ಸೇನಾ ವಿಮಾನದ ಅವಶೇಷ ಸಮುದ್ರದಲ್ಲಿ ಪತ್ತೆ 10
ಸಂತ್ರಸ್ತರಿಗೆ ಏಕರೂಪ ಪರಿಹಾರಕ್ಕೆ ಒತ್ತಾಯ 4
ಸೆನ್ಸೆಕ್ಸ್ ನಿಫ್ಟಿ ಚಿನ್ನ (Std. 10g) ಶುದ್ಧ ಬೆಳ್ಳಿ (kg) ₹/$
31,271 9,663 ₹29,732 (ಬೆಂಗಳೂರು) ₹40,800 (ಬೆಂಗಳೂರು) 64.33

# ‘ಐ.ಟಿ: ಬಿ.ಟೆಕ್ ಸಾಲದು’

ಹೈದರಾಬಾದ್ (ಪಿಟಿಐ): ‘ಮಾಹಿತಿ ತಂತ್ರಜ್ಞಾನ ರಂಗದಲ್ಲಿ ಬರುವ ದಿನಗಳಲ್ಲಿ ಬಿ.ಟೆಕ್ ಪದವೀಧರರಿಗೆ ಉದ್ಯೋಗ ಅವಕಾಶ ಕಡಿಮೆಯಾಗಲಿವೆ’ ಎಂದು ಮಣಿಪಾಲ್ ಗ್ಲೋಬಲ್ ಎಜುಕೇಷನ್ ಸರ್ವಿಸಸ್‌ನ ಅಧ್ಯಕ್ಷ ಟಿ. ವಿ. ಮೋಹನ್‌ದಾಸ್ ಪೈ ಅಂದಾಜಿಸಿದ್ದಾರೆ.



ಮೋಹನ್‌ದಾಸ್

‘ಐ.ಟಿ ವಲಯದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಬಿ.ಟೆಕ್ ಪದವಿ ಸಾಕಾಗುವುದಿಲ್ಲ. ನಿರ್ದಿಷ್ಟ ಕ್ಷೇತ್ರಗಳಲ್ಲಿ ವಿಶೇಷ ಪರಿಣತಿ ಸಾಧಿಸಿದವರಿಗೆ, ಸ್ನಾತಕೋತ್ತರ ಪದವಿ (ಎಂ.ಟೆಕ್) ಪಡೆದವರಿಗೆ ಮಾತ್ರ ಐ.ಟಿ ಸಂಸ್ಥೆಗಳು ಮಣೆ ಹಾಕಲಿವೆ.

‘ಎಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಓದುವವರೆಲ್ಲ ದಯವಿಟ್ಟು ಎಂ.ಟೆಕ್ ಮಾಡಿ, ನಿರ್ದಿಷ್ಟ ವಿಷಯದಲ್ಲಿ ವಿಶೇಷ ಪರಿಣತಿ ಸಾಧಿಸಿ. ನಿಮ್ಮಷ್ಟಕ್ಕೆ ನೀವೇ ಕೋಡಿಂಗ್ ಕಲಿಯಿರಿ. ಭವಿಷ್ಯದಲ್ಲಿ ಐ.ಟಿ ಸಂಸ್ಥೆಗಳು ಅಭ್ಯರ್ಥಿಯ ಕೋಡಿಂಗ್ ತಿಳಿವಳಿಕೆ ಆಧರಿಸಿ ನೇಮಕ ಮಾಡಿಕೊಳ್ಳಲಿವೆ.

‘ಐ.ಟಿ ಕ್ಷೇತ್ರದಲ್ಲಿನ ಜಾಗತಿಕ ವೆಚ್ಚವು ಪ್ರಸಕ್ತ ಸಾಲಿನಲ್ಲಿ ಕೇವಲ ಶೇ 2ರಷ್ಟು ಇರಲಿದೆ. ಈ ಹಿಂದೆ ಇದು ಶೇ 3 ರಿಂದ 4 ರಷ್ಟಿತ್ತು. ಇದು ಕೂಡ ಉದ್ಯೋಗ ಅವಕಾಶಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಈ ವರ್ಷ ಐ.ಟಿ ಉದ್ದಿಮೆಯಲ್ಲಿ 1.5 ಲಕ್ಷದಿಂದ 1.6 ಲಕ್ಷದವರೆಗೆ ಹೊಸ ನೇಮಕಾತಿಗಳು ನಡೆಯಲಿವೆ’ ಎಂದು ಪೈ ಅಭಿಪ್ರಾಯಪಟ್ಟಿದ್ದಾರೆ.

‘ಐ.ಟಿ ವಲಯದಲ್ಲಿ ಉದ್ಯೋಗ ಅವಕಾಶ ಕಡಿಮೆಯಾಗುತ್ತಿವೆ. ವ್ಯಾಪಕ ಪ್ರಮಾಣದಲ್ಲಿ ಉದ್ಯೋಗಿಗಳನ್ನು ಮನೆಗೆ ಕಳಿಸಲಾಗುತ್ತಿದೆ ಎನ್ನುವ ವರದಿ ಉತ್ಪ್ರೇಕ್ಷೆಯಿಂದ ಕೂಡಿವೆ. ಕೆಲಸದಲ್ಲಿ ದಕ್ಷತೆ ತೋರಿಸದವರನ್ನು ಪ್ರತಿ ವರ್ಷ ಮನೆಗೆ ಕಳಿಸಲಾಗುತ್ತಿದೆ. ಅಂಥವರ ಸಂಖ್ಯೆ ಶೇ 1ರಿಂದ 2ರಷ್ಟು ಮಾತ್ರ.

‘ಐ.ಟಿ ಉದ್ದಿಮೆಯಲ್ಲಿ ಕಾರ್ಮಿಕ ಸಂಘಟನೆ ಸ್ಥಾಪಿಸಲು ಕೆಲವರು ಹವಣಿಸುತ್ತಿದ್ದಾರೆ. ಅವರಿಗೆ ಯಾರೊಬ್ಬರ ಬೆಂಬಲ ದೊರೆಯುವುದಿಲ್ಲ. ಇಂಥವರ ಹಿಂದೆ ಹೋಗುವವರು ಯಾವತ್ತೂ ಉದ್ಯೋಗ ಗಿಟ್ಟಿಸಿಕೊಳ್ಳುವುದಿಲ್ಲ’ ಎಂದೂ ಪೈ ಅಭಿಪ್ರಾಯಪಟ್ಟಿದ್ದಾರೆ.

ಗುರುವಾರ, ಜೂನ್ 8, 2017 | ಮಂಗಳೂರು | ₹ 5.00 | ಪುಟ 24 | ಸಂಪುಟ 20 | ಸಂಚಿಕೆ 158 • www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕಾಮನಬಿಲ್ಲು**
ಹಸಿರ ಹಾದಿಯಲ್ಲಿ ನಡೆದ ಸೈಕಲ್ ಯಾತ್ರೆ...

ಮ್ಯಾನ್ಮಾರ್: 116 ಮಂದಿ ಇದ್ದ ಸೇನಾ ವಿಮಾನದ ಅವಶೇಷ ಸಮುದ್ರದಲ್ಲಿ ಪತ್ತೆ 10

ಸಂತ್ರಸ್ತರಿಗೆ ಏಕರೂಪ ಪರಿಹಾರಕ್ಕೆ ಒತ್ತಾಯ 4

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 31,271 | 9,663 | ₹29,732 (ಬೆಂಗಳೂರು) | ₹40,800 (ಬೆಂಗಳೂರು) | 64.33 |

CEN LIB

## ರದ್ದಾಗಲಿವೆ ಯುಜಿಸಿ, ಎಐಸಿಟಿಇ ಶೀಘ್ರವೇ ನಿಯಂತ್ರಣ ಸಂಸ್ಥೆ?

**ನವದೆಹಲಿ (ಪಿಟಿಐ):** ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ಇತಿಹಾಸದ ಪುಟ ಸೇರುವ ದಿನಗಳು ಸನಿಹವಾಗಿವೆ.

ಈ ಎರಡೂ ಸಂಸ್ಥೆಗಳನ್ನು ರದ್ದುಪಡಿಸಲು ನಿರ್ಧರಿಸಿರುವ ಕೇಂದ್ರ ಸರ್ಕಾರ ಅವುಗಳಿಗೆ ಬದಲಿಯಾಗಿ ಉನ್ನತ ಶಿಕ್ಷಣ ಸಬಲೀಕರಣ ನಿಯಂತ್ರಣ ಸಂಸ್ಥೆಯನ್ನು (ಎಚ್‌ಇಇಆರ್‌ಎ) ಶೀಘ್ರದಲ್ಲಿಯೇ ರಚಿಸಲಿದೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ನೀತಿ ಆಯೋಗದ ಜತೆ ಕಾರ್ಯ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ಇಲಾಖೆಯು (ಎಚ್‌ಆರ್‌ಡಿ) ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣ ಸಂಸ್ಥೆಗಳನ್ನು ಒಂದೇ ವ್ಯವಸ್ಥೆಯಡಿ ತರಲು ಉದ್ದೇಶಿಸಿದೆ. ಉದ್ದೇಶಿತ ಸಂಸ್ಥೆಯ ರಚನೆ ಮತ್ತು ಅದಕ್ಕೆ ಕಾನೂನುಬದ್ಧವಾಗಿ ನೀಡುವ ಅಧಿಕಾರ ಕುರಿತು ವಿಸ್ತೃತ ಯೋಜನಾ ವರದಿ ಮತ್ತು ನೀಲ ನಕ್ಷೆಯನ್ನು ಸಚಿವಾಲಯ ಸಿದ್ಧಪಡಿಸಿದೆ.

ಪ್ರಸ್ತುತ ಯುಜಿಸಿ ಹಾಗೂ ಎಐಸಿಟಿಇಗಳಲ್ಲಿ ಹಲವಾರು ನಿಯಮಗಳು ಜಾರಿಯಲ್ಲಿವೆ. ದೇಶದಾದ್ಯಂತ ಉನ್ನತ ಶಿಕ್ಷಣಕ್ಕೆ ಏಕಸ್ವರೂಪದ ನಿಯಮಗಳನ್ನು ಜಾರಿಗೆ ತರುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಗೊತ್ತಾಗಿದೆ.